(ಇಂದು ದಿನಾಂಕಃ 22-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ವಕೀಲರಿಂದ ಶ್ರೀ. ಎನ .ಸಿ .ಎಚಃ**

1. ನನಗೆ ವಾದಿ ಮತ್ತು ಪ್ರತಿವಾದಿಯ ಪರಿಚಯವಿರುತ್ತಾರೆ. ನಾವು ಒಂದೇ ಊರಿನವರು ಇದ್ದೇವೆ.. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಾದಿ ಹೇಳಿ ಬರೆಸಿರುತ್ತಾರೆ, ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ವಕೀಲರು ಬರೆಸಿರುತ್ತಾರೆ. ಅವರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಹಬೀಬ ಅಲಿ ಆರ್ಥಿಕವಾಗಿ ಸದೃಢವಾಗಿರುತ್ತಾರೆ ಅವರಿಗೆ ಯಾವುದೇ ಬೇರೆ ಸಾಲ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಹಬೀಬ ಅಲಿ ಆರ್ಥಿಕವಾಗಿ ಸದೃಢವಾಗಿರುತ್ತಾರೆ ಅವರಿಗೆ ಯಾವುದೇ ಬೇರೆ ಸಾಲ ಇರಲಿಲ್ಲ ಆದ್ದರಿಂದ ಆಸ್ತಿ ಮಾರಾಟ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ಸಾಲ ಇಲ್ಲದಿದ್ದರೆ ಹೊಲ ಏಕೆ ಮಾರಾಟ ಮಾಡುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿಯು ಯಾರ ಹತ್ತಿರ ಸಾಲ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ 21 ಬಟಾ 1-2-3 ಇರುತ್ತದೆ. ಅದರ ವಿಸ್ತೀರ್ಣ 8 ಎಕರೆ ಇರುತ್ತದೆ. ಮಾತುಕತೆ ಗುಲ್ಬರ್ಗಾದಲ್ಲಿಯೆ ಆಗಿರುತ್ತದೆ. ಮಾತುಕತೆ ನಡೆದಾಗ ನಾನು ಇರಲಿಲ್ಲ. ಮಾತು ಕತೆ ರುಸ್ತಮ ಪುರದಲ್ಲಿ ಆಗಿರುತ್ತದೆ ಯಾವ ಜಾಗದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಮಾತು ಕತೆ ವಾದಿಯ ಮನೆಯಲ್ಲಿ ಆಗಿದೆ ಎಂದು ಹೇಳುತ್ತಾರೆ. ಮಾತು ಕತೆ ಆದಾಗ ನಾನು ಇರಲಿಲ್ಲ, ಅದು ಮುಗಿದ ನಂತರ ನಾನು ಬಂದಿರುತ್ತೇನೆ. ಪ್ರತಿ ಎಕರೆಗೆ ರೂ.2,00,000/- ಎಂದು ಮಾತುಕತೆ ಆಗಿತ್ತು. ಮಾತು ಕತೆ ನಡೆದ ದಿನ ನನ್ನ ಸಮಕ್ಷಮದಲ್ಲಿ ಕಾಗದ ಪತ್ರ ಬರೆದಿಲ್ಲ. ನಾನು ಇರಲಿಲ್ಲ ಆದ್ದರಿಂದ ಎಷ್ಟು ಮೊತ್ತ ಮತ್ತು ಏನು ಮಾತುಕತೆ ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಆ ದಿನ ಎಷ್ಟು ಹಣ ಕೊಟ್ಟರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಕ್ಕು ಕೊಟ್ಟಿದ್ದು ನಾನು

ನೋಡಿರುತ್ತೇನೆ ಆದರೆ ಎಷ್ಟು ಚಕ್ಕು ಇತ್ತು ಎಂದು ನನಗೆ ಗೊತ್ತಿಲ್ಲ. ಇದನ್ನುಹೊರತು ಪಡಿಸಿ ಈ ವ್ಯವಹಾರಕ್ಕೆ ಸಂಬಂಧ ಪಟ್ಟಂತೆ ನನ್ನನ್ನು ಬೇರೆ ಎಲ್ಲಿಯಾ ಕರೆದಿಲ್ಲ. ಕಾಗದ ಪತ್ರ ಬರೆದಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕಾಗದ ಪತ್ರವನ್ನು ಎಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಗಂಡ ಗುಲ್ಬರ್ಗಾದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ರುಸ್ತಮಪುರನಲ್ಲಿ ಮತ್ತು ಗುಲ್ಬರ್ಗಾ ಎರಡು ಕಡೆ ಇರುತ್ತಾರೆ ಎಂದು ಹೇಳುತ್ತಾರೆ. ವಾದಿ ಮತ್ತು ಅವರ ಗಂಡ ಗುಲ್ಬರ್ಗಾದಲ್ಲಿ ಲೇವಾ ದೇವಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ.ನಮ್ಮ ಊರಿನಲ್ಲಿ ವಾದಿಯವರು ಸಾಕಷ್ಟು ಜನರಿಗೆ ಹಣ ಕೊಟ್ಟು ಲೇವಾ ದೇವಿ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೂಡ ಒಕ್ಕಲುತನಕ್ಕೆ ಅವಶ್ಯಕತೆ ಇದ್ದರೆ ವಾದಿಯಿಂದ ಹಣ ಪಡೆಯುವುದು ಕೊಡುವುದು ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ ಅವಶ್ಯಕತೆಯಿದ್ದಾಗ ಹಣ ತೆಗೆದುಕೊಳ್ಳುತ್ತೇನೆ ಆದ್ದರಿಂದ ಅವರಿಗೆ ಸಹಾಯ ಮಾಡಲು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ದಾವಾ ಆಸ್ತಿಯ ಬಗ್ಗೆ ಯಾವುದೆ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ವಾದಿ ಹೇಳಿಕೊಟ್ಟಂತೆ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.